# ಗುರುವಿನ ಗುಲಾಮನಾಗುವ ತನಕ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru, page No. 39
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 220
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 68
4. **Note:** Lyrics given without highlights are as per Ref. 2. The wordings in Ref. 2 are similar to Ref. 3. Lyrics in Ref. 1 are given in yellow highlights as they are slightly different.
5. **Note:** Ankita is different in these books. We have considered Ref.1 as standard and taken that Ankita for listing.
6. **Note:** Singer has followed lyrics as in Ref. 1.

| | |
|---|---|
| ರಾಗ: ಲಾವಣಿ ಚಾಲ್ ತಾಳ: ಆದಿ | ರಾಗ: ನಾದನಾಮಕ್ರಿಯೆ ತಾಳ: ಆದಿ |
| | |
| ಗುರುವಿನ ಗುಲಾಮನಾಗುವ ತನಕ | ಗುರುವಿನ ಒಲುಮೆಯು ಆಗುವ ತನಕ |
| ದೊರೆಯದಣ್ಣ ಮುಕುತಿ ‖ ಪ ‖ | ದೊರೆಯದಣ್ಣ ಮುಕುತಿ |
| | |
| ಪರಿ ಪರಿ ಶಾಸ್ತ್ರವನೋದಿದರೇನು | ಪರಿ ಪರಿ ಶಾಸ್ತ್ರವನೇಕವನೋದಿ |
| ವ್ಯರ್ಥವಾಯಿತು ಭಕುತಿ ‖ ಅಪ ‖ | ವ್ಯರ್ಥವಾಯಿತು ಭಕುತಿ |
| | |
| ಆರು ಶಾಸ್ತ್ರವ ಓದಿದರಿಲ್ಲ | ಆರು ಶಾಸ್ತ್ರಗಳನೋದಿದರೇನು |
| ಮೂರಾರು ಪುರಾಣವ ಮುಗಿಸಿದರಿಲ್ಲ | ಮುರಾರು ಪುರಾಣವ ಮುಗಿಸಿದರೇನು |
| ಸಾರ ನ್ಯಾಯ ಕಥೆಗಳ ಕೇಳಿದರಿಲ್ಲ | ಸಾರಿ ಸಜ್ಜನರ ಸಂಗವ ಮಾಡದೆ |
| ಧೀರನಾಗಿ ತಾ ಪೇಳಿದರಿಲ್ಲ ‖ 1 ‖ | ಧೀರನಾಗಿ ತಾ ಮೆರೆದರೇನು |
| | |
| ಕೊರಳೊಳು ಮಾಲೆ ಧರಿಸಿದರಿಲ್ಲ, | ಕೊರಳೊಲು ಮಾಲೆಯ ಧರಿಸಿದರೇನು |
| ಬೆರಳೊಳು ಜಪಮಣಿ ಎಣಿಸಿದರಿಲ್ಲ | ಕರದಲಿ ಜಪ-ಮಣಿ ಎಣಿಸಿದರೇನು |
| ಮರುಳನಾಗಿ ತಾ ಶರೀರಕೆ ಬೂದಿ | ಮರುಳನಂತೆ ತಾ ಶರೀರಕೆ ಬೂದಿಯ |
| ಒರೆಸಿಕೊಂಡು ತಾನು ತಿರುಗಿದರಿಲ್ಲ ‖ 2 ‖ | ಒರೆಸಿಕೊಂಡು ತಾ ತಿರುಗಿದರೇನು |
| | |
| ನಾರಿಯ ಭೋಗ ಅಳಿಸಿದರಿಲ್ಲ | ನಾರಿಯರ ಸಂಗವ ಅಳಿದರೇನು |
| ಶಾರೀರಿಕ ಸುಖವ ಬಿಡಿಸಿದರಿಲ್ಲ | ಶರೀರಕೆ ದುಃಖವ ಪಡಿಸಿದರೇನು |

ನಾರದ ವರದ ಪುರಂದರ ವಿಠ್ಠಲನ
ಸೇರಿಕೊಂಡು ತಾ ಪಡೆಯುವ ತನಕ ||3||

ಮಾರನಯ್ಯ ಶ್ರೀ ಪುರಂದರ ವಿಠ್ಠಲನ
ಮರೆಯದೆ ಮನದೊಳು ಬೆರೆಯುವ ತನಕ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಆರು ಶಾಸ್ತ್ರವ** – ಷಟು ಶಾಸ್ತ್ರಗಳು: ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವ-ಮೀಮಾಂಸಾ ಮತ್ತು ಉತ್ತರ-ಮೀಮಾಂಸಾ

**ಮೂರಾರು ಪುರಾಣವ** – ಹದಿನೆಂಟು ಪುರಾಣಗಳು : ಬ್ರಾಹ್ಮ, ಪಾದ್ಮ, ವೈಷ್ಣವ, ಶೈವ, ಭಾಗವತ, ನಾರದೀಯ, ಮಾರ್ಕಂಡೇಯ, ಆಗ್ನೇಯ, ಭವಿಷ್ಯ, ಬ್ರಹ್ಮವೈವರ್ತ, ಲೈಂಗ್ಯ, ವರಾಹ, ಸ್ಕಾಂದ, ವಾಮನ, ಕೌರ್ಮ, ಮಾತ್ಸ್ಯ, ಗಾರುಡ, ಬ್ರಹ್ಮಾಂಡ (ಭಾಗವತ, 12, 7, 23).

**ಧೀರನಾಗಿ ಪೇಳಿದರಿಲ್ಲ** – ಸಭೆಯ ಮುಂದೆ ಪ್ರವಚನ ಮಾಡಿದರೆ.

**ಮರುಳ್** = ಪಿಶಾಚಿ

**ಮರುಳನಾಗಿ...** – ಅವಧೂತನಂತೆ.

**ನಾರಿಯ ಭೋಗ ಅಳಿಸಿದರೆ** – ನೈಷ್ಠಿಕ ಬ್ರಹ್ಮಚರ್ಯೆಯನ್ನೋ ಸಂನ್ಯಾಸಾಶ್ರಮವನ್ನೋ ಕೈಗೊಂಡರೆ.

**ಶರೀರಕೆ ಸುಖ ಬಿಡಿಸಿದರೆ** – ಕೃಛ್ರ, ಚಾಂದ್ರಾಯಣ ಮೊದಲಾದ ವ್ರತ. ತಪಸ್ಸು, ಉಪವಾಸಗಳನ್ನು ಮಾಡಿ ಶರೀರವನ್ನು ಕಷ್ಟಕ್ಕೀಡು ಮಾಡಿದರೆ.

**ನಾರದ ವರದ** – ದೇವರ್ಷಿಯಾದ ನಾರದನಿಗೆ ನಾರಾಯಣನು ಶ್ವೇತದ್ವೀಪದಲ್ಲಿ ಭಾಗವತ ಧರ್ಮವನ್ನು ಉಪದೇಶಿಸಿ ಉದ್ಧರಿಸಿದ ಹಿನ್ನೆಲೆ.

**Classification:** Keerthane
**Ankita:** sri purandara vittala
**Location:** NA
**Category:** Mahatmya Jnana
**Sub-Category:** mukti, shastra, bhakti, purana, japa, deha, hennu, bhoga, sukha, narada,
**Pravachana:** NA
**Explanation:** NA